

(6ನೇ ಪುಟದಿಂದ)

ಕಿರಣಗಳು ನೀರ ಹನಿಯೊಳಗೆ ಹಾದು ಹೋಗುವುದನ್ನೇ ಕಾಯುತ್ತಾ ಹಲವಾರು ಚಿತ್ರಗಳನ್ನು ತೆಗೆಯುವಲ್ಲಿ ಸಫಲನಾದೆ. ಆಮೇಲೆ ಆ ಚಿತ್ರಗಳನ್ನೆಲ್ಲಾ ಕಂಪ್ಯೂಟರ್‌ನಲ್ಲಿ ತುಂಬಿಸಿ, ಹಿಗ್ಗಿಸಿ ಒಂದೊಂದಾಗಿ ನೋಡಿದಾಗ... ಆಹಾ ಜಲಬಿಂದುವೆ!

ಆ ಸೂರ್ಯನ ಪ್ರಜ್ವಲಿಸುವ ಕಿರಣಗಳು, ಗಾಳಿಯಿಂದ ರಕ್ಷಣೆಗಾಗಿ ಹಾಕಿದ್ದ ಸೀರೆಯ ಬಣ್ಣಗಳು, ಜೊತೆಗೆ ಹೂ–ಎಲೆಗಳಿಗೆ ನಿಸರ್ಗವೇ ಬಳಿದ ಬಣ್ಣಗಳು.. ಎಲ್ಲವೂ ಅಲ್ಲಿ ಪ್ರತಿಫಲನಗೊಂಡು ವಿಶ್ವರೂಪದರ್ಶನ ಮಾಡಿಸುತ್ತಿದ್ದುವು. ಸೂರ್ಯ ಪ್ರಭೆಯೊಡನೆ ಬಣ್ಣದ ಓಕುಳಿಯೇ ಹಿಮಮಣಿಗಳೊಳಗೆ ಚೆಲ್ಲಾಡಿದಂತಿತ್ತು! ಅಲ್ಲಿ ಕಾಣುತ್ತಿದ್ದುದು ಸತ್ಯವೋ.. ಫ್ಯಾಂಟಸಿಯೋ... ಗೊತ್ತಾಗುತ್ತಿರಲಿಲ್ಲ. ಹೊಳೆಹೊಳೆವ ಹನಿಗಳ ಒಳಗೆ ಮುತ್ತು, ರತ್ನ, ಪಚ್ಚೆ, ಗೋಮೇಧಿಕ ಮೊದಲಾದ ಅಮೂಲ್ಯ ಮಣಿಗಳನ್ನೇ ಕಂಡು ಮೋಹಿತನಾದೆ!

ಆಗ ಭೂಮಿಯ ಮೇಲೆ ಬೀಳುವ ಪ್ರತಿಯೊಂದು ನೀರ ಹನಿಯೂ ಮುತ್ತು, ರತ್ನ, ವಜ್ರಗಳಂತೆ ಅಮೂಲ್ಯ ಎಂಬ ಮಾತು ನೆನಪಿಗೆ ಬಂದಿತು.



